ತಾಲ್ಲೂಕು.	ಹೋಬಳಿ.	ಗ್ರಾಮ.	ಬೀಜವರಿ. ಎ.	ಗುಂ.	ಕಂದಾಯ. ರೂ.	ಆ.
ಗೋರೀಬಿದನೂರು.	ದಾರಿನಾಯಕನಪಾಳ್ಯ	ಜರಬಂದಪಳ್ಳಿ ..	372	33	130	8
		ರಾಮಚಂದ್ರಾಪುರ ..	281	26	112	8
		ಸೋಮನಪಳ್ಳಿ ..	37	18	25	8
		ಅಡಗಕ್ಕನಾಲಪಳ್ಳಿ ..	40	29	22	8
		ತೇರಮರದಪಳ್ಳಿ ..	66	7	14	0
		ಪುಟ್ಟೇಗೌಡನದಿನ್ನೆ ..	26	34	50	0
		ವೆಂಕಟೇಶಪುರ ..	59	6	79	8
		ಭಂಗಾರಮ್ಮನದಿನ್ನೆ ..	26	27	21	8
		ಚಿನ್ನಪ್ಪನಕೋಟೆ ..	31	27	8	0
		ಈದರಾಮ್ಯವರಪಳ್ಳಿ ..	107	23	63	12
		ಬಿದರಲಪಳ್ಳಿ ..	154	35	75	0
		ರಾಮಣ್ಣನಕೆರೆ ..	164	27	103	12
		ಗಿಲ್ಲಗುಂಡ್ಲದಿನ್ನೆ ..	62	27	14	12
		ಕೆಸರುಗುಟ್ಟಪಳ್ಳಿ ..	147	34	235	4
		ಶ್ರೀನಿವಾಸಪುರ ದಿನ್ನೆ ..	210	35	69	12
		ಪಿಲ್ಲಿಗುಟ್ಟೇನಹಳ್ಳಿ ..	43	6	58	4
		ಸುಬ್ಬಾಯನಪಳ್ಳಿ ..	101	27	40	8
		ಕೊಂಡೇನಪಳ್ಳಿ ..	79	8	48	4
		ಗುಳವಪಳ್ಳಿ ..	213	27	174	8

ಅಬ್ದುಲ್‌ರಹಿಮ್ಮಾ,
ಆಫೀಷಿಯೆಟಿಂಗ್ ಡೆಪ್ಯುಟಿ ಕಮ್ಮಿಷನರ್.

ಫಾರೆಸ್ಟ್ ಇಲಾಖೆ.

ತಾರೀಖು 5ನೇ ಮಾರ್ಚ್ 1889.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿರತಕ್ಕ ಇದರಡಿ ಕಂಡ ಫೂಟ್ ಫಾರೆಸ್ಟುಗಳಲ್ಲಿ ವೃತ್ಪತ್ತಿ ಆಗುವ ಇಲಾಚಿ ಮತ್ತು ಮೆಣಸನ್ನು ಗೇಣೀ ಮೂಲಕ ಹತ್ತು ವರುಷಗಳ ಕಾಲಕ್ಕೆ 1889—90ನೇ ಸಕ್ಕಾರ್ ಸಾಲ್ ಲಾಗಾಯತು 1898—99ನೇ ಸಕ್ಕಾರ್ ಸಾಲಿನ ವರಿಗೆ ಜವಾಯಿಸುವ ಹಕ್ಕುದಾರೀ ಬಗ್ಯೆ ದರಖಾಸ್ತುಗಳು ಇದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1. ಬಿನಲೆ ಫೂಟ್ ಫಾರೆಸ್ಟು.

2. ಕೆಂಪು ಹೊಳೆ ಮತ್ತು ಕೆಂಚನ ಕುಮರೀ ಫಾರೆಸ್ಟು.

2. ದರಖಾಸ್ತುಗಳು, "ಫೂಟ್‌ಫಾರೆಸ್ಟುಗಳ ಯಿಲಾಚಿ ಮತ್ತು ಮೆಣಸಿನ ಗೇಣೀಗೋಸ್ಕರ ದರಖಾಸ್ತುಗಳು" ಯಂಬದಾಗಿ ಮೇಲ್‌ವಿಳಾಸ ಬರಿಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಗೆ 1889ನೇ ಜೂರ್ 24ನೇ ಮಕ್ಕುಂ ಯಾ ಅದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು, 1889ನೇ ಇಸವಿ ಜೂರ್ 24ನೇ ಮಕ್ಕುಮಿನಲ್ಲಿ ಹಾಜರಾಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಸದರೀಯವರಿಂದಲಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರಿಂದಲಾಗಲಿ ಆಫೀಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವವು. ಸದರೀ ದರಖಾಸ್ತುಗಳ ಅಜ್ಜೈರು ವಿಲೇವಾರಿಯು ಮೈಸೂರು ದೇಶದ ಫಾರೆಸ್ಟ್ ವ ಪ್ಯಾಟೇರ್ಪಗಳ ಇಸ್ಪೆಕ್ಟರ್ ಜನರಲ್‌ಯವರಿಗೆ ಶೇರಿರುತ್ತೆ—ಸದರೀ ಯಾವ ದರಖಾಸ್ತನ್ನಾಗಲಿ ಯಾ ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬೂ ತೆಗೆಸದೇಯೇ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಪುಳಸಿಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಬಂದು ನೂರು ರೂಪಾಯಿಗಳ ಶೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಪೂಜಿಸ್ಕಾಡಲ್ಪಟ್ಟ ಶೇವಣಿಗಳು ಆಯಾ ಜನಗಳಿಗೆ ಕ್ರಮವಾಗಿ ವಾಪಸು ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟ್ ವ ಪ್ಯಾಟೇರ್ಪಗಳ ಇಸ್ಪೆಕ್ಟರ್ ಜನರಲ್‌ಯವರಿಂದ ಆಕ್ಸೈರಾಗಿ ಮಂಜೂರ್ಮಾಡಲ್ಪಡುತ್ತದೆಯೋ ಅಂಥಾ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗ

ದಾಗಿಯಾದರೂ ಅಥವಾ ಕರೆನ್ಸೀ ನೋಟುಗಳ ಮೂಲಕವಾಗಿಯಾದರೂ ತಾನು ಮೊದಲೇ ಹಾಜರ್ಮಾಡಿರುವ ಡಿಪಾಜಿಟ್ ಮೊಬಲಗು ದೇಖೀಲ್ ಗುತ್ತಿಗೇ ಮೊಬಲಗಿನ, ಪತ್ತರಲ್ಲಿ ಬಂದು ಭಾಗಕ್ಕೆ ಸಮನಾಗುವಂತೆ ಶೇವಣೇ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರಲ್ಲಿ ಹಾ ಜರ್ಮಾಡಿ ತಕ್ಕ ಛಾಪಾಕಾಗದದಲ್ಲಿ ಮುಂದೆ ಪುದಹರಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು ಬದ್ಧನಾಗಿ ಕರಾರು ಬರದು ಕೊಡತಕ್ಕದ್ದು. ಮತ್ತು ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಆವಶ್ಯಕವಾದ ಶೇವಣಿಯನ್ನು ಹಾಜರ ಮಾಡಿದ್ದರೆ ಮೊದಲೇ ಯಿಡೋಣಾದ ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲಾಮಾಡ ಲ್ಪಡುವದು.

5. ಹಾಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು ಇದರಡಿ ಕಂಡ ಷರತ್ತುಗಳಿಗೆ ವಳಪಟ್ಟಿರತಕ್ಕದ್ದು.

I. ಗೇಣೀ ಮೊಬಲಗು ಡತ್ತು ಸಮನಾದ ಸಾಲಿಯಾನಾ ವಿಸ್ತುಗಳಾಗಿ ಪ್ರತಿ ಆಗಸ್ಟು ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸ ಲನ್ನು ಜವಾಯಿಸುವದಕ್ಕೆ ಮುಂಚಿತವಾಗಿ ಸರ್ಕಾರಕ್ಕೆ ಪಾವತಿ ಮಾಡಲ್ಪಡತಕ್ಕದ್ದು. ಗೇಣೀದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದು ಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳು ಸರ್ಕಾರ ಸ್ವಾಧೀನತೆಗೆ ತೆಗದುಕೊಳ್ಳಲ್ಪಡುವದು ಗೇಣಿ ದಾರನಿಂದ ಯಿಡಲ್ಪಟ್ಟ ಶೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣೀವಾಯಿದೆಯು ಮುಗಿದ ತರುವಾಯ ಗೇಣಿಯನ್ನು ರಿನ್ಯೂ ಯಾನೇ ಪುನಃ ಪಡೆಯುವ ಬಗ್ಗೆ ಸರ್ಕಾರದವರಿಗೆ ಯು ಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣೀದಾರನಿಗೆ ಅ ವಕಾಶ ಕೊಡಲ್ಪಡಬಹುದು.

III. ಗೇಣಿಯು, ಇಲಾಚಿ ಮತ್ತು ಮೆಣಸನ್ನು ಜವಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾ ತ್ರವೇ ಆಗಿರುವದರಿಂದ ಇನ್ಯಾವ ತರಹೆಯ ಇತರ ಫಸಲುಗಳಿ ಗೇಣಿಗೆ ಪಡವಿರುವ ಫಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡ ಕೂಡದು, ಪರಂತು, ಇಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬಾಳೆ, ಹರಳು ಯಾ ಇತರ ಮರಗಳು ಬೆಳಸಕೂಡದೆಂದು ಅರ್ಥವಾಗತಕ್ಕದ್ದಲ್ಲ.

IV. ಫಾರೆಸ್ಟ್ ಆಫೀಸರರ ಲಿಖಿತಮೂಲಕವಾದ ಅಪ್ಪಣೆ ವಿನಹ ಯಾವ ವಿಧವಾದ ಮರವೇ ಆಗಲಿ ಕಡಿಯಲ್ಪಡಕೂಡದು ಮ ತ್ತು ಗೇಣೀಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚೀ ಗಿಡಗಳಾಗಲಿ ಮೆಣಸಿನ ಬಳ್ಳಿಯಾಗಲಿ ಯಾವ ಸಂದರ್ಭ ಗಳಲ್ಲೂ ಆಗೆದು ಆಚೆಗೆ ಸಾಗಿಸಲ್ಪಡಕೂಡದು, ಇಲಾಚೀ ಗಿಡಗಳ ಮತ್ತು ಮೆಣಸಿನ ಬಳ್ಳಿಗಳ ಬೆಳವಣಿಗೆ ಯಾ ಅಭಿವೃ ದ್ಧಿಗೋಸ್ಕರವೇ ಜವಾನನ್ನು ಪೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾ ಗ ಗೇಣೀದಾರನು ಫಾರೆಸ್ಟು ಆಫಿಸರರಿಗೆ ಬರದುಕೊಳ್ಳತಕ್ಕದ್ದು ಅವರು ತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗದುಕೊಳ್ಳ ಲ್ಪಡತಕ್ಕದ್ದು ಗೇಣೀದಾರನು ಸದರೀ ಮರಗಳ ಬೈಕಿ ಯಾವದನ್ನಾದರೂ ಅಪೇಕ್ಷಿಸಿದರೆ ಇದರಡಿಕಂಡ ಗೊತ್ತಾದ ಸೀನಿಯಾ ರೇಜ್ ಯಾನೇ ತೀರ್ವೇದರಗಳು ಯಾ ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ಯಿನ್ನೂ ಕಮ್ಮಿ ಆದ ದರಗಳನ್ನು ಪಾವತಿಮಾಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು.

ಪೂ	ದರ ಮರ 1ಕ್ಕೆ	ರೂಪಾಯಿ	15	ಹಬನಿ	ದರ ಮರ 1ಕ್ಕೆ	ರೂಪಾಯಿ	6
ಹೆಸವ	ಡಿಟೋ	,,	10	ಯಬನಿ	ಡಿಟೋ	,,	10
ಕರೀಮರ	ಡಿಟೋ	,,	8	ಇತರ ತಮೋ ತರಹೆಯ ಮರ ಅಡಿ		,,	3½
ನಂದಿ	ಡಿಟೋ	,,	8	ಬೊಂಬುಗಳು 1,000ಕ್ಕೆ		,,	10

V. ಗೇಣೀದಾರನು ಇಲಾಚಿ ಮತ್ತು ಮೆಣಸು ವಿನಹ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲಿ ಹಕ್ಕುದಾರನಾಗಿರುವದಿಲ್ಲ. ಮತ್ತು ಫಾರೆಸ್ಟುಗಳಲ್ಲಿ ಯಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ ನಿರೋಧಪಡಿಸುವದಕ್ಕಾಗಲಿ ಯಾ ಮತ್ತಾವ ವಿಧವಾಗಿಯಾದರೂ ಅತಂಕಪಡಿಸುವದಕ್ಕಾಗಲಿ ಗೇಣೀದಾರಗೆ ಸ್ವತಂತ್ರ ವಿರುವದಿಲ್ಲ ಮತ್ತು ಗವರ್ಮೆಂಟಿನವರು ಅಂಥಾ ತಮೋ ಫಾರೆಸ್ಟುಗಳಲ್ಲಿ ಯಾ ಯಲ್ಲ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನು ತಾವೇ ಪುರೈಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡದ ಇಲಾಚಿ ವ ಮೆಣಸಿನ ಗೇಣಿಯು ಗೇಣೀವಾರನ ಇಷ್ಟಾನುಸಾರ ವಿಕ್ರಯಿಸಲ್ಪಡಬಹುದು, ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು, ಅಂಥಾ ಪರಭಾರೆಯ ವರ್ತಮಾನವು ಡೆಪ್ಯುಟಿ ಕಮ್ಮಿಷನರವರಿಗೆ ಅವರ ಆಫಿಸಿನಲ್ಲಿ ದಾಖಲೆ ಬಗ್ಗಾಗಿ ಕೊಡಲ್ಪಡತಕ್ಕದ್ದು. ಮತ್ತು ಗೇಣಿ ಪರಭಾರೆಯು ರಜಿಸ್ಟ್ರೇಷನ್ ಆಕ್ಟಿನ ನಿಯಮಾವಳಿಗಳನ್ನನುಸರಿಸಿ ಕ್ರಮವಾಗಿ ರಜಿಸ್ಟರ್ ಮಾಡತಕ್ಕದ್ದು.

ಬಿ. ಎಸ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ.